ಬೆಳಗಾಂ ಜಿಲ್ಲೆಯ ಸೊಗಲ ಕ್ಷೇತ್ರವನ್ನು ಪ್ರವಾಸಿ ಕೇಂದ್ರವೆಂದು ಪರಿಗಣಿಸುವುದು

೫೧೩. (೧೦೫೧) ಶ್ರೀ ಆರ್. ಸಿ. ಬಾಳಿಕಂದರಗಿ (ಬೈಲಹೊಂಗಲ).—ಮಾನ್ಯ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ, ಸೋಗಲ ಕ್ಷೇತ್ರವನ್ನು ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತಿಸಲು, ಶಾಸಕರಿಂದ ಏನಾದರೂ ಅರ್ಜಿಗಳನ್ನು ಸ್ವೀಕರಿಸಲಾಗಿದೆಯೆ ?

(ಆ) ಹಾಗಿದ್ದಲ್ಲಿ ಈ ಕ್ಷೇತ್ರವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕಾದರೆ, ಸರ್ಕಾರದಿಂದ ಎಷ್ಟು ಹಣ ಖರ್ಚು ಮಾಡಬೇಕಾಗಬಹುದು.

ಶ್ರೀ ಎಂ. ರಘುಪತಿ (ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ).—

(ಅ) ಹೌದು

(ಆ) ಸದ್ಯಕ್ಕೆ, ಆರ್ಥಿಕ ಕೊರತೆ ಇರುವುದರಿಂದ ಸದರಿ ಸ್ಥಳವನ್ನು ಅಭಿವೃದ್ಧಿಪಡಿಸಲು ೧೯೮೫-೮೪ ಮತ್ತು ೧೯೮೪-೮೫ನೇ ಸಾಲಿನ ಯೋಜನೆಯಲ್ಲಿ ಆಳವಡಿಸಿಕೊಂಡಿರುವುದಿಲ್ಲ. ಹಣದ ಪರಿಸ್ಥಿತಿ ಸುಧಾರಿಸಿದಾಗ ಅಭಿವೃದ್ಧಿ ಪಡಿಸಲಾಗುವುದು.

ಬೀದರ್ ಡಿಪೋಗೆ ಗೊತ್ತುಪಡಿಸಿಲಾದ ಬಸ್ಸುಗಳು

೫೧೪. (೧೦೬೯) ಶ್ರೀನಾರಾಯಣ ರಾವ್ ಮನಳಿ (ಬೀದರ್).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೀದರ್ ಡಿಪೋಗೆ ಒದಗಿಸಲಾಗಿರುವ ಒಟ್ಟು ವಾಹನಗಳ ಸಂಖ್ಯೆ ಎಷ್ಟು ?

(ಆ) ಈ ಡಿಪೋ ವ್ಯಾಪ್ತಿಯಲ್ಲಿರುವ ಮಾರ್ಗಗಳೆಷ್ಟು ?

(ಇ) ಈ ಡಿಪೋವಿನ ವ್ಯಾಪ್ತಿಯಲ್ಲಿ ಇನ್ನು ಹೊಸ ಮಾರ್ಗಗಳನ್ನು ತೆಗೆದು ಕೊಳ್ಳಲು ಏನಾದರು ಪ್ರಸ್ತಾವನೆ ಇದೆಯೇ ?

(ಈ) ಹಾಗಿದ್ದಲ್ಲಿ ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ಸಚಿವರು).—

(ಅ) ೪೨ ವಾಹನಗಳು

(ಆ) ೬೦ ಮಾರ್ಗಗಳು

(ಇ) ಇದೆ

(ಈ) ಗುಲ್ಬರ್ಗ – ಬೀದರ್ ರಾಷ್ಟ್ರೀಕರಣ ಯೋಜನೆಯು ಅನುಮೋದನೆಯಾದ ಕೂಡಲೆ ಹೊಸ ಮಾರ್ಗಗಳಲ್ಲಿ ಸಂಚಾರ ವ್ಯವಸ್ಥೆಯನ್ನು ಪ್ರಾರಂಭಿಸಲಾಗುವುದು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪ್ರತಿ ವಿಭಾಗದಲ್ಲಿ ಲಾಭ ಹಾಗೂ ನಷ್ಟ

೫೧೭. (೧೨೨೭) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೦-೮೧ ೧೯೮೧-೮೨ ಮತ್ತು ೧೯೮೨-೮೩ನೇ ಸಾಲುಗಳಲ್ಲಿ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಪತ್ರಿ ವಿಭಾಗದಲ್ಲಿ ಬಂದಿರುವ ಲಾಭ ಅಥವಾ ಸಂಭವಿಸಿದ ನಷ್ಟದ ಪೊಬಲಗೆಷ್ಟು ?

(ಆ) ಮೇಲ್ಕಂಡ ವರ್ಷಗಳಲ್ಲಿ ಈ ರೀತಿ ಲಾಭ ಬರಲು ಅಥವಾ ನಷ್ಟ ಸಂಭವಿಸಲು ಮಹತ್ವದ ಅಂಶಗಳಾವುವು ?

(ಇ) ನಷ್ಟದಲ್ಲಿ ನಡೆಯುತ್ತಿರುವ ವಿಭಾಗಗಳಲ್ಲಿ ನಷ್ಟಕ್ಕೆ ಬದಲು ಲಾಭ ಪಡೆಯಲು ಕೈಕೊಂಡಿರುವ ಕ್ರಮಗಳಾವುವು ?